ಸುಮ್ಮನ ಮೂಲ್ಯಾಗ ಅಳಕೋತ ಕೂತ ಬಿಡ್ತಾನಂತ. ಅದೇನೋ 'ಡಿಪ್ರಷನ್' ಅಂತಾರಲಾ... ಹಂಗ ಆಗ್ಲಿಕ್ಕತ್ತದಂತ. ಅವರಿಬ್ಬರಿಗೂ ಏನ ಮಾಡಬೇಕಂತ ತಿಳಿವಲ್ತು... ನೀನ ಏನರೆ..." ಎನ್ನುವಷ್ಟರಲ್ಲಿ ಬಾಗಿಲು 'ಧಡಾರ್' ಎಂದು ಶಬ್ದವಾಯಿತು. "ಅಜ್ಜೀ, ಮಾಮಾ" ಎನ್ನುವ ಸಹನಾಳ ಕೂಗು ಕೇಳಿಸಿತು. ನಾನು ತಟ್ಟನೆ ನನ್ನ ರೂಮಿನ ಒಳಗೋಡಿ ಬಾಗಿಲು ಹಾಕಿಕೊಂಡೆ. ಮೇಕಪ್ಪಿನ ಅವಸರದಲ್ಲಿ ಹೊರಬಾಗಿಲಿನ ಅಗಳಿ ಹಾಕಲು ಮರೆತಿದ್ದೆ. ಒಂದೇ ಕ್ಷಣದಲ್ಲಿ ಬಚಾವಾಗಿದ್ದೆ. ಇಲ್ಲವಾದರೆ ನನ್ನ ವೇಷದ ಅನಾವರಣವಾಗುತ್ತಿತ್ತು.

'ಸುನಯ್'ನ ವಿಷಯ ಇಲ್ಲಿಯವರೆಗೆ ಬಂದದ್ದು ಗೊತ್ತಿರಲಿಲ್ಲ. ಧಾರವಾಡದ ವಿದ್ಯಾಪ್ರಗತಿ ಶಾಲೆಯಲ್ಲಿ ಅವನು ಚೆನ್ನಾಗಿ ಹೊಂದಿಕೊಂಡಿದ್ದ. ಶನಿವಾರ, ಭಾನುವಾರಗಳಲ್ಲಿ ಮನೆಗೆ ಕರೆತಂದರೆ ಸೋಮವಾರ ತಿರುಗಿ ಹೋಗುವಾಗ ಖುಷಿಯಿಂದ ಕುಣಿಯುತ್ತ ಹೋಗುತ್ತಿದ್ದ. ಇಬ್ಬರೂ ಶಿಕ್ಷಕರು ಅವನನ್ನು ಸ್ವಂತ ಮಗನಂತೆ ನೋಡುತ್ತಿದ್ದರು. ಸುಲಭಾಳಿಗೆ ಚಿಂತೆಯೇ ಇರಲಿಲ್ಲ. ಅಲ್ಲಿ ಎಲ್ಲರೊಡನೆ ಬೆರೆಯುತ್ತಿದ್ದ. ಅಲ್ಪ ಸ್ವಲ್ಪ ಮಾತನಾಡುತ್ತಿದ್ದ. ಒಟ್ಟಿನಲ್ಲಿ ಸುಧಾರಿಸುತ್ತಿದ್ದ. ಈಗ ಒಮ್ಮೆಲೆ ವಾತಾವರಣ ಬದಲಾದೊಡನೆ ಅವನಿಗೆ ದಿಗ್ಭ್ರಮೆಯಾದಂತಾಗಿತ್ತು. ಬೇರೆ ಊರು, ಅಪರಿಚಿತ ಭಾಷೆ, ಸಹಪಾಠಿಗಳು, ಶಿಕ್ಷಕರು... ಎಲ್ಲಕ್ಕೂ ಹೊಂದಿಕೊಳ್ಳಲಾಗದೇ ಚಂಡಿ ಹಿಡಿಯುತ್ತಿದ್ದ. ಚಿಕ್ಕವ ಸಂಚಿತ್‌ನದು ಏನೂ ತೊಂದರೆಯಿಲ್ಲ. ಈಗ ಸುಜಾತಳದು ಸುಲಭಾ ವೈನಿಯ ಸಂಬಂಧ ಅಷ್ಟಾಗಿ ಸರಿ ಇಲ್ಲ. ಮೊದಲಾದರೆ ಇಬ್ಬರೂ ಫೋನೆತ್ತಿದರೆ ಅರ್ಧ ಗಂಟೆ ಬಿಡುತ್ತಿರಲಿಲ್ಲ. ಈಗ ಕೊಂಚ ಬಿಗಡಾಯಿಸಿದೆ. ಹೀಗೇ ಸಣ್ಣ ಪುಟ್ಟ ಮಾತುಗಳು "ಅತ್ತಿನ್ನ ನಾವೊಬ್ಬರ ನೋಡಕೋಬೇಕು. ಅದೂ ಈ ಪರಿಸ್ಥಿತಿಯೊಳಗ... ನಮ್ಮ ಕರ್ಮ" ಅಂದದ್ದು ಸುಜಾತ. ಅವಳ ಮಾತುಗಳಲ್ಲಿ ಕೊಂಕು ಸ್ವಲ್ಪ ಜಾಸ್ತಿಯೇ. "ಏನ ಮಾಡ್ಲಿಕ್ಕಾಗ್ತದ? ಸ್ವಂತ ಮನಿ ಬಿಟ್ಟು ಬರೂದುಲ್ಲಂತ ಇಷ್ಟ ದಿವ್ಸ ಅವರು ನಮ್ಮ ಜೋಡಿ ಊರಿಗೆ ಬರ್ಲೇ ಇಲ್ಲ. ಈಗ... ಇಂಥಾ ಪರಿಸ್ಥಿತಿಯೊಳಗ ಅವರ್ನ ಚಂಡೀಗಢದಷ್ಟು ದೂರ ಹೆಂಗ ಕರಕೊಂಡ್ಹೋಗ್ಲಿಕ್ಕಾಗ್ತದ ಹೇಳು? ಅಲ್ಲಿ ವಾತಾವರಣ, ಹವಾಗುಣ ನಮಗ ಹೊಂದ್ತದೋ ಇಲ್ಲೋ... ಇನ್ನ ಇವರ್ನ ಕರಕೊಂಡ್ಹೋಗಿ ಹೆಚ್ಚು ಕಡಿಮಿ ಆದರ...?" ಎಂದರಂತೆ ವೈನಿ. ಅಷ್ಟೇ, ಮನಸು ಕಹಿಯಾಯಿತು. ಅಂತರ ಉಳಿದುಕೊಂಡುಬಿಟ್ಟಿತು. ಯೋಚಿಸುತ್ತಲೇ ವೇಷ ಕಳಚಿದೆ. ರೂಮಿನಲ್ಲಿದ್ದ ಪುಟ್ಟ ಬಾಥ್‌ರೂಮಿನಲ್ಲೇ ಸ್ನಾನ ಮಾಡಿದೆ.

ಮಧ್ಯಾಹ್ನದ ನಂತರ ಮಾತನಾಡಲೋ ಬೇಡವೋ ಎಂಬ ದ್ವಂದ್ವದಲ್ಲೇ ತೊಳಲಾಡುತ್ತ ವೈನಿಗೆ ಫೋನ್ ಮಾಡಿದೆ. "ಹೇಳ್ರಿ ಭಾವಜಿ" ಎಂದರು. ಮೆತ್ತಗೆ ಸುನಯ್‌ನ ಬಗ್ಗೆ ಮಾತು ತೆಗೆದೆ. "ನೀವು ನನಗೂ ತಮ್ಮ ಇದ್ಧಂಗ. ಏನಂತ ಹೇಳ್ಲಿ? ಸುನಯ್ ಧಾರವಾಡದ ಸಾಲಿಗೆ ಛೊಲೊ ಹೊಂದಿಕೊಂಡಿದ್ದ. ಈಗ ಇಲ್ಲೆ ವಟ್ಟ ಹೊಂದಕೋವಲ್ಲ. ಭಾಷಾ ಬ್ಯಾರೇ ಅಗಿ ಬಿಡ್ತದ. ಅಂವಗ ಹಿಂದಿ ಏನೂ ತಿಳಿಯೂದಿಲ್ಲ. ಸಾಲಿಗೆ ಹೋಗೂದಿಲ್ಲಂತ ಹಟಾ ಹಿಡಿತಾನ. ಜೋರಲೇ ಕಳಸಿದ್ರ ಮೂಲ್ಯಾಗ ಕೂತಬಿಡ್ತಾನಂತ. ತಿನ್ನೂದುಲ್ಲಾ, ಉಣ್ಣೂದುಲ್ಲಾ, ಮಾತಾಡೂದುಲ್ಲಾ... ಬರೇ ಅಳತಾನಂತ. ನಾ ಇವನ ಸಲವಾಗಿ ರಜಾ ಹಾಕಿ ಹದಿನೈದು ದಿವ್ಸಾತು" ಎಂದರು. "ಮತ್ತ... ನನಗೇನು ಹೇಳೇ ಇಲ್ಲಲಾ ವೈನಿ? ಅಣ್ಣಾನೂ ಮಾತಾಡಿಲ್ಲ" ಎಂದೆ. ಅವರು ಸಣ್ಣ ಧ್ವನಿಯಲ್ಲಿ "ಅವ್ವಾನ ಮುಂದ ಎಲ್ಲಾ ಹೇಳಿದ್ದೆ. ನಿಮ್ಮದ... ತ್ರಾಸು ನಿಮಗ ರಗಡು. ವ್ಯವಹಾರ, ಮನಿ ಜೋಡಿ ಅವ್ವಾನ್ನೂ ನೋಡಕೋಬೇಕು. ಹಂತಾದ್ರಾಗ